# ಅಮಿತಾಭ್ ಬಚ್ಚನನೂ ಸಹನಾ ಬಾನುವೂ



■ **ಬೆಳಗೋಡು ರಮೇಶ ಭಟ್**
ಕಲೆ: ರಾಮಕೃಷ್ಣ ಸಿದ್ರಪಾಲ

ಇಂದ್ರನರಮನೆಯಂತಹ ಸೆಟ್ಟಿಂಗಿನಲ್ಲಿ ತಾನು ಬಾಲ್ಯದಿಂದಲೂ ಆರಾಧಿಸುತ್ತಿದ್ದ ಅಮಿತಾಭ್ ಬಚ್ಚನ್ ಎಂಬ ಪುಣ್ಯಪುರುಷನು ತನ್ನೆದುರು ಹಾಟ್ ಸೀಟಿನಲ್ಲಿ ಕುಳಿತು ಕಣ್ಣೀರು ಹಾಕುತ್ತಿದ್ದ ಸುಂದರಿಯೊಬ್ಬಳಿಗೆ, ಕಣ್ಣೀರು ಒರೆಸಿಕೊಳ್ಳಲು ತನ್ನದೇ ಕರವಸ್ತ್ರ ತೆಗೆದುಕೊಡುತ್ತಿದ್ದುದನ್ನು, ಸಹನಾ ಬಾನು ಎಂಬ ಈ ಹೆಣ್ಣುಮಗಳು ಭಯಭಕ್ತಿಯಿಂದ ವಿನೀತಳಾಗಿ ನೋಡುತ್ತಿದ್ದಳು.

ಕೌನ್ ಬನೇಗಾ ಕ್ರೋರ್‌ಪತಿಯ ಹಾಟ್ ಸೀಟಿನಲ್ಲಿ ಕುಳಿತಿದ್ದ ಆ ಸುಂದರಿಯು ಯಾವುದೋ ಕಾಲದಲ್ಲಿ, ತನ್ನ ಹೆತ್ತವರ ಮಾತುಮೀರಿ ಅಂತರ್ಜಾತೀಯ ವಿವಾಹವಾಗಿದ್ದಳಂತೆ. ಆ ದಿನದಿಂದ ಆಕೆಯ ಹೆತ್ತವರು ಆಕೆಯೊಡನೆ ಸಂಬಂಧ ಕಡಿದುಕೊಂಡು ಬಿಟ್ಟಿದ್ದರಂತೆ. ಒಳ್ಳೆಯ ಉದ್ಯೋಗದಲ್ಲಿದ್ದ ಗಂಡ. ಒಂದೋ ಎರಡೋ ಮಕ್ಕಳು. ಈಗ ಎಲ್ಲವೂ ಇದೆ. ಆದರೆ ತನ್ನ ಭಾವಕೋಶದ ಒಂದು ಭಾಗವೇ ಆಗಿದ್ದ ತಂದೆ ತಾಯಿಯರು ತನ್ನನ್ನು ದೂರ ಮಾಡಿಬಿಟ್ಟರು. ತಾಯಿ ತೀರಿಹೋದರು. ತಂದೆ ಒಬ್ಬಂಟಿಯಾಗಿ ಇಳಿವಯಸ್ಸನ್ನು ಕಳೆಯುತ್ತಿದ್ದಾರೆ. ಆದರೆ ತನ್ನೊಂದಿಗೆ ಯಾವ ಸಂಬಂಧವನ್ನೂ ಇರಿಸಿಕೊಂಡಿಲ್ಲವೆಂದು ಆ ಹೆಣ್ಣುಮಗಳು, ತನ್ನ ಮೇಕಪ್ಪು ಕೊಂಚವೂ ಹಾಳಾಗದ ಹಾಗೆ ಕಣ್ಣೀರು ಒರೆಸಿಕೊಳ್ಳುವುದನ್ನು ನೋಡುತ್ತಿರುವ ಅಮಿತಾಭ್ ಬಚ್ಚನ್ ಎಂಬ ಮಹಾನ್ ಕಲಾವಿದ, ಕೊಂಚ ನೋವು ಮಾಗಿದ ಧ್ವನಿಯಲ್ಲಿ, 'ಮಗಳೇ, ನಿನ್ನ ತಂದೆಯೊಂದಿಗೆ ಏನಾದರೂ ಹೇಳಬೇಕಿದ್ದರೆ ಈ ಕ್ಷಣ ಹೇಳಿಬಿಡು. ಎಲ್ಲೋ ಇರುವ ನಿನ್ನ ತಂದೆ ಈ ಶೋ ನೋಡುತ್ತಿದ್ದರೆ, ನಿನ್ನ ಅಳಲನ್ನು ಕೇಳಿಸಿಕೊಳ್ಳಬಹುದು' ಎಂದನು.

ಆಗ ಆ ಸುಂದರಿಯು 'ಮಹಾನುಭಾವ, ನನ್ನ ತಂದೆಯೂ ನಿಮ್ಮ ಫ್ಯಾನು. ಬಾಲ್ಯದಲ್ಲಿ ನಮ್ಮೊಂದಿಗೆ ಕುಳಿತು ಕೌನ್ ಬನೇಗಾ ಕ್ರೋರ್‌ಪತಿ ನೋಡುತ್ತಿದ್ದನು ಮತ್ತು ನೀವು ಕೇಳುತ್ತಿದ್ದ ಎಲ್ಲಾ ಪ್ರಶ್ನೆಗಳನ್ನೂ ಉತ್ತರವನ್ನೂ ಬರೆದಿಡುತ್ತಿದ್ದನು. ನನಗೂ ಅಮ್ಮನಿಗೂ ಬಾಯಿಪಾಠ ಮಾಡಿಸುತ್ತಿದ್ದನು. ಒಮ್ಮೆಯಾದರೂ ಹಾಟ್ ಸೀಟಿನಲ್ಲಿ ಕುಳಿತು ನಾಲ್ಕೈದು ಲಕ್ಷ ರೂಪಾಯಿ ಸಂಪಾದಿಸಿ ಒಂದು ಮನೆಕಟ್ಟಿಕೊಳ್ಳಬೇಕೆಂದು ನಿಮ್ಮ ಕೌನ್ ಬನೇಗಾ ಸೀರೀಸುಗಳಲ್ಲಿ ಭಾಗವಹಿಸಲು ವಿಫಲ ಪ್ರಯತ್ನ ಮಾಡುತ್ತಿದ್ದನು. ಅವನು ಈಗಲೂ ನೋಡುತ್ತಾ ಕುಳಿತಿರಬಹುದು' ಎಂದು ಅಸ್ಖಲಿತ ಹಿಂದಿಯಲ್ಲಿ ಹೇಳಿದಳು.

ಆಗ ತಾನೇ ಆಕೆ ಮೂರು ಲಕ್ಷದ ಇಪ್ಪತ್ತು ಸಾವಿರದ ಪ್ರಶ್ನೆಗೆ ಉತ್ತರಿಸಿದ್ದಳು.

ಅಮಿತಾಭ್ ಬಚ್ಚನನು 'ನೀವೀಗ ಮೂರು ಲಕ್ಷದ ಇಪ್ಪತ್ತು ಸಾವಿರ ಗೆದ್ದುಬಿಟ್ಟಿರಿ.